ಸೃಜನಿ

SRUJANI: Indian Journal of Innovative Research and Development (SIJIRD)
Volume-3 Issue 5, November - December 2024, Pp. 124-131
Bi-Monthly, Peer-Reviewed, Open Access, Indexed Journal

I S S N: 2583-3510
SIRDF JOURNALS
editor@srujani.in
www.srujani.in

# ಗ್ರಾಮೀಣಾಭಿವೃದ್ಧಿಯಲ್ಲಿ ಪ್ರಧಾನ ಮಂತ್ರಿ ಆವಾಸ್ ಯೋಜನೆಯ ಪಾತ್ರ: ಸಮಾಜಶಾಸ್ತ್ರೀಯ ಅಧ್ಯಯನ

**ವಿಜಯಭಾಸ್ಕರ್ ಹೆಚ್. ಕೆ**[1] **ಮತ್ತು ಪ್ರೊ. ಎಸ್. ಯಶೋಧ**[2]
[1]ಸಂಶೋಧನಾ ವಿದ್ಯಾರ್ಥಿ, [2]ಪ್ರಾಧ್ಯಾಪಕರು
ಸಮಾಜಶಾಸ್ತ್ರ ಅಧ್ಯಯನ ವಿಭಾಗ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.

**Abstract:**

*ಪ್ರಸ್ತುತ ಅಧ್ಯಯನವು ಗ್ರಾಮೀಣಾಭಿವೃದ್ಧಿಯಲ್ಲಿ ಪ್ರಧಾನ ಮಂತ್ರಿ ಆವಾಸ್ ಯೋಜನೆ (PMAY) ಯ ಪಾತ್ರವನ್ನು ಸಮಾಜಶಾಸ್ತ್ರೀಯ ದೃಷ್ಟಿಕೋನದಿಂದ ಅಧ್ಯಯನಿಸುತ್ತದೆ. ಆರ್ಥಿಕವಾಗಿ ದುರ್ಬಲವಾಗಿರುವ ಸಮುದಾಯಗಳಿಗೆ ವಸತಿ ಕಲ್ಪಿಸುವ ಉದ್ದೇಶದಿಂದ ಕೇಂದ್ರ ಸರ್ಕಾರವು ಈ ಯೋಜನೆಯನ್ನು ರೂಪಿಸಿ ಅನುಷ್ಠಾನಗೊಳಿಸುತ್ತಿದೆ. ಈ ಯೋಜನೆ ನಗರ ಪ್ರದೇಶಗಳಿಗಿಂತ ಗ್ರಾಮೀಣ ಪ್ರದೇಶಗಳಿಗೆ ಹೆಚ್ಚಿನ ಆದ್ಯತೆ ನೀಡುತ್ತಿದೆ. ಈ ಯೋಜನೆಯ ಅನುಷ್ಠಾನದಿಂದ ಗ್ರಾಮೀಣ ಸಮುದಾಯಗಳಲ್ಲಾಗಿರುವ ಸಾಮಾಜಿಕ ಮತ್ತು ಆರ್ಥಿಕ ಬದಲಾವಣೆಗಳು ಹೇಗೆ ಉಂಟಾಗುತ್ತವೆ ಎಂಬುದನ್ನು ಈ ಅಧ್ಯಯನ ವಿವರಿಸುತ್ತದೆ. ಈ ಯೋಜನೆ ವಸತಿ ಸಮಸ್ಯೆಗೆ ಪರಿಹಾರವನ್ನು ನೀಡುವುದರ ಜೊತೆಗೆ ಸಮಾಜಿಕ ಸಮಾನತೆ ಬೆಳೆಸುವುದು, ಜೀವನ ಗುಣಮಟ್ಟವನ್ನು ಹೆಚ್ಚಿಸುವುದು, ಮತ್ತು ಗ್ರಾಮೀಣ ಪ್ರತಿರೋಧ ಸಾಮರ್ಥ್ಯವನ್ನು ಕೂಡ ಬಲಪಡಿಸುತ್ತದೆ. ಈ ಹಿನ್ನೆಲೆಯಲ್ಲಿ ಗ್ರಾಮೀಣಾಭಿವೃದ್ಧಿಯಲ್ಲಿ ಪ್ರಧಾನ ಮಂತ್ರಿ ಆವಾಸ್ ಯೋಜನೆಯ ಪಾತ್ರವನ್ನು ವಿಶ್ಲೇಷಿಸಲಾಗಿದೆ.*

**Keywords:** *ಪ್ರಧಾನ ಮಂತ್ರಿ ಆವಾಸ್ ಯೋಜನೆ (PMAY), ಗ್ರಾಮೀಣಾಭಿವೃದ್ಧಿ, ಸಾಮಾಜಿಕ ಸಮಾನತೆ, ಆರ್ಥಿಕ ಚಲನಶೀಲತೆ, ವಸತಿ ಸೌಲಭ್ಯ.*

## ಪೀಠಿಕೆ

ಗ್ರಾಮೀಣ ವಸತಿ ಸೌಲಭ್ಯವು ಸಾಮಾಜಿಕ–ಆರ್ಥಿಕ ಅಭಿವೃದ್ಧಿಯ ಮೂಲಭೂತ ಅಂಶವಾಗಿದೆ. ಗ್ರಾಮೀಣ ವಸತಿಯು ಗ್ರಾಮೀಣ ಜನಸಂಖ್ಯೆಯ ಜೀವನದ ಗುಣಮಟ್ಟ, ಆರೋಗ್ಯ, ಮತ್ತು ಕಲ್ಯಾಣದ ಮೇಲೆ ಪರಿಣಾಮ ಬೀರುತ್ತದೆ. ಸೂಕ್ತ ವಸತಿ ಸೌಲಭ್ಯದ ಅವಶ್ಯಕತೆಯನ್ನು ಅರಿತು, ಕೇಂದ್ರ ಸರ್ಕಾರ 2015ರಲ್ಲಿ *"2024ರೊಳಗೆ ಪ್ರತಿಯೊಬ್ಬರಿಗೂ ಮನೆ"* ಎಂಬ ದೃಷ್ಟಿಕೋನದೊಂದಿಗೆ ಪ್ರಧಾನ ಮಂತ್ರಿ ಆವಾಸ್ ಯೋಜನೆ (PMAY) ಅನ್ನು ಪ್ರಾರಂಭಿಸಿತು. ಈ ಯೋಜನೆ PMAY–ನಗರ ಮತ್ತು PMAY–ಗ್ರಾಮೀಣ ಎಂಬ ಎರಡು ಘಟಕಗಳಾಗಿ ವಿಭಜಿತವಾಗಿದೆ, ನಗರ ಮತ್ತು ಗ್ರಾಮೀಣ ಪ್ರದೇಶಗಳ ವಸತಿ ಅವಶ್ಯಕತೆಗಳನ್ನು ಗಮನದಲ್ಲಿಟ್ಟುಕೊಂಡು ಈ ಯೋಜನೆಯನ್ನು ಅನುಷ್ಠಾನಗೊಳಿಸಲಾಗಿದೆ.

***Please cite this article as:*** ವಿಜಯಭಾಸ್ಕರ್ ಹೆಚ್. ಕೆ ಮತ್ತು ಎಸ್. ಯಶೋಧ. (2024). ಗ್ರಾಮೀಣಾಭಿವೃದ್ಧಿಯಲ್ಲಿ ಪ್ರಧಾನ ಮಂತ್ರಿ ಆವಾಸ್ ಯೋಜನೆಯ ಪಾತ್ರ: ಸಮಾಜಶಾಸ್ತ್ರೀಯ ಅಧ್ಯಯನ. *ಸೃಜನಿ: ಇಂಡಿಯನ್ ಜರ್ನಲ್ ಆಫ್ ಇನ್ನೋವೇಟಿವ್ ರಿಸರ್ಚ್ ಅಂಡ್ ಡೆವಲಪ್‌ಮೆಂಟ್*, 3(5), 124–131

PMAY-ಗ್ರಾಮೀಣ ಘಟಕವು ಮನೆ ಇಲ್ಲದವರಿಗೆ ಮತ್ತು ಕಚ್ಚಾ ಮನೆಗಳಲ್ಲಿ ವಾಸಿಸುತ್ತಿರುವವರಿಗೆ ಮೂಲಭೂತ ಸೌಲಭ್ಯಗಳೊಂದಿಗೆ ಶಾಶ್ವತ ಮನೆಗಳನ್ನು ಒದಗಿಸಲು ಉದ್ದೇಶಿಸಿದೆ. ಸಮಾನತೆ ಮತ್ತು ಸೌಕರ್ಯದ ಜೀವನವನ್ನು ನೀಡುವ ಮೂಲಕ, ಈ ಯೋಜನೆ ಹಿಂದುಳಿದ ಸಮುದಾಯಗಳನ್ನು ಪ್ರೋತ್ಸಾಹಿಸಲು, ಗ್ರಾಮೀಣ ಬಡತನ ಕಡಿಮೆ ಮಾಡಲು ಮತ್ತು ಸಾಮಾಜಿಕ ನ್ಯಾಯವನ್ನು ಉತ್ತೇಜಿಸಲು ಉದ್ದೇಶಿಸಿದೆ.

ಈ ಅಧ್ಯಯನವು PMAY–ಗ್ರಾಮೀಣ ಯೋಜನೆಯಿಂದ ಗ್ರಾಮೀಣ ಪ್ರದೇಶಗಳ ಸಾಮಾಜಿಕ ರಚನೆಗಳು, ಆರ್ಥಿಕ ಚಲನಶೀಲತೆ, ಮತ್ತು ಸಮುದಾಯ ಕಲ್ಯಾಣ ಹೇಗೆ ಪ್ರಭಾವಿತವಾಗುತ್ತವೆ ಎಂಬುದನ್ನು ಸಮಾಜಶಾಸ್ತ್ರದ ದೃಷ್ಟಿಕೋನದಿಂದ ಅಧ್ಯಯನ ಮಾಡಲಾಗಿದೆ. ಫಲಾನುಭವಿಗಳು ಗಳಿಂದ ಪ್ರಮಾಣಾತ್ಮಕ ಹಾಗೂ ಗುಣಾತ್ಮಕ ಮಾಹಿತಿಯನ್ನು ವಿಶ್ಲೇಷಿಸುವ ಮೂಲಕ, ಈ ಯೋಜನೆಯು ಗ್ರಾಮೀಣಾಭಿವೃದ್ಧಿಯಲ್ಲಿ ವಹಿಸುವ ಪಾತ್ರವನ್ನು ಅಳೆಯುವುದು ಮತ್ತು ನೀತಿಗಳ ಸುಧಾರಣೆಗಾಗಿ ಪ್ರಸ್ತಾಪಗಳನ್ನು ಒದಗಿಸುವುದು ಈ ಅಧ್ಯಯನದ ಉದ್ದೇಶವಾಗಿದೆ.

ಭಾರತವು ಗ್ರಾಮಗಳಿಂದ ಕೂಡಿದ ರಾಷ್ಟ್ರವಾಗಿದೆ. ಭಾರತದ ಒಟ್ಟು ಜನ ಸಂಖ್ಯೆ 121 ಕೋಟಿ ಇದ್ದು, ಆ ಜನಸಂಖ್ಯೆಯಲ್ಲಿ ಶೇ.70ರಷ್ಟು ಜನರು ಗ್ರಾಮೀಣ ಪ್ರದೇಶಗಳಲ್ಲಿ ವಾಸಿಸುತ್ತಿದ್ದಾರೆ (ಭಾರತದ ಜನಗಣತಿ 2011ರ ಪ್ರಕಾರ). ಗ್ರಾಮೀಣ ಜನಸಂಖ್ಯೆಗಳಲ್ಲಿ ವ್ಯಾಪಕ ಬಡತನ, ಕಡಿಮೆ ಸಾಕ್ಷರತೆ ಮತ್ತು ಆದಾಯದ ಮಟ್ಟಗಳು, ಹೆಚ್ಚಿನ ನಿರುದ್ಯೋಗ, ಕಳಪೆ ಪೋಷಣೆ ಮತ್ತು ಕಡಿಮೆ ಆರೋಗ್ಯ ಸ್ಥಿತಿ ಮುಂತಾದ ಸಮಸ್ಯೆಗಳು ಕಂಡು ಬರುತ್ತದೆ. ಇಂತಹ ನಿರ್ದಿಷ್ಟ ಸಮಸ್ಯೆಗಳನ್ನು ಪರಿಹರಿಸಲು ಮತ್ತು ಗ್ರಾಮೀಣ ಜನರ ಜೀವನದ ಗುಣಮಟ್ಟವನ್ನು ಸುಧಾರಿಸಲು ಹಲವಾರು ಗ್ರಾಮೀಣ ಅಭಿವೃದ್ಧಿ ಕಾರ್ಯಕ್ರಮಗಳನ್ನು ಸರ್ಕಾರವು ರೂಪಿಸಿದೆ ಅವುಗಳಲ್ಲಿ "ವಸತಿ ಯೋಜನೆ" ಯು ಸಹ ಒಂದು.

ಮಾನವನ ಮೂಲಭೂತ ಸೌಕರ್ಯಗಳಲ್ಲಿ ವಸತಿಯು ಅತಿ ಮುಖ್ಯವಾದದ್ದು. ಕುಟುಂಬದ ಸಾಮಾಜಿಕ ಮತ್ತು ಆರ್ಥಿಕ ಸ್ಥಿತಿಗತಿಯನ್ನು ನಿರ್ಧರಿಸುವುದರಲ್ಲಿ ಮನೆಯು ಒಂದು ಮಾನದಂಡವಾಗಿ ಹೆಚ್ಚಿನ ಮಹತ್ವ ಪಡೆದುಕೊಂಡಿದೆ ಎಂದರೆ ತಪ್ಪಾಗಲಾರದು. ಪ್ರತಿಯೊಬ್ಬರೂ ತಮ್ಮ ಅವಶ್ಯಕತೆಗೆ ಒಂದು ಸ್ವಂತ ಮನೆ ಹೊಂದಬೇಕೆಂಬ ಗುರಿಯನ್ನು ಇಟ್ಟುಕೊಂಡಿರುತ್ತಾರೆ. ಆರ್ಥಿಕವಾಗಿ ಮುಂದುವರೆದ ಹಾಗೂ ಮುಂದುವರೆಯುತ್ತಿರುವ ಕುಟುಂಬಗಳು ಹೆಚ್ಚಿನ ಮೌಲ್ಯದ ವಸತಿ ಅಥವಾ ನಿವೇಶನ ಪಡೆಯಲು ಹಾತೊರೆದರೆ, ಬಡ ಮತ್ತು ದುರ್ಬಲ ವರ್ಗದವರು ಸಾಮಾನ್ಯವಾಗಿ ಉಚಿತ ಮನೆ ಅಥವಾ ನಿವೇಶನವನ್ನು ಪಡೆಯಲು ಬಯಸುತ್ತಾರೆ. ಇದಕ್ಕಾಗಿ ಸರ್ಕಾರದ ಯೋಜನೆಗಳನ್ನು ಆಶ್ರಯಿಸುತ್ತಾರೆ ಅಂತಹ ವಸತಿ ಯೋಜನೆಗಳಲ್ಲಿ ಒಂದಾದ ಪ್ರಧಾನ ಮಂತ್ರಿ ಗ್ರಾಮೀಣ ಆವಾಸ್ ಯೋಜನೆ ಇದು ಕೇಂದ್ರ ಸರ್ಕಾರದ ಪ್ರಾಯೋಜಕತ್ವ ಯೋಜನೆಯಾಗಿದ್ದು, ಇದು ಯಾವುದೇ ಒಂದು ಜನಾಂಗಕ್ಕೆ ಮಾತ್ರ ಸೀಮಿತವಾಗಿರದೇ ಸಾಮಾಜಿಕ ನ್ಯಾಯ ಒದಗಿಸುವ ಮುಖಾಂತರ ಗ್ರಾಮೀಣ ಪ್ರದೇಶಗಳಲ್ಲಿ ವಾಸಿಸುವ ಎಲ್ಲಾ ಜಾತಿ ಸಮುದಾಯದವರಿಗೆ ವಸತಿ ಯೋಜನೆಯನ್ನು ಜಾರಿಗೆ ತಂದಿರುತ್ತದೆ. ಈ ಹಿನ್ನಲೆಯಲ್ಲಿ ಪ್ರಸ್ತುತ ಅಧ್ಯಯನವು ಮಾಧ್ಯಮಿಕ ಮಾಹಿತಿಯ ಮೂಲವನ್ನು ಒಳಗೊಂಡಂತೆ, ಚಾಮರಾಜನಗರ ಜಿಲ್ಲೆಯ ವ್ಯಾಪ್ತಿಯಲ್ಲಿ 2018 ರಿಂದ 2023ರ ವರೆಗೆ ಇಂದಿರಾ ಆವಾಸ್ ಯೋಜನೆ/ಪ್ರಧಾನ ಮಂತ್ರಿ ಆವಾಸ್ ಯೋಜನೆ ಅಡಿಯಲ್ಲಿ 5 ವರ್ಷಗಳ ಅವಧಿಯಲ್ಲಿ ಪೂರ್ಣಗೊಂಡಿರುವ ಮನೆಗಳ ವಿವರವನ್ನು ಅದರ ಸಾಧಕ ಬಾಧಕಗಳನ್ನು ವಿಶ್ಲೇಷಿಸಲಾಗಿರುತ್ತದೆ.

**ಇಂದಿರಾ ಆವಾಸ್ ಯೋಜನೆ/ ಪ್ರಧಾನ ಮಂತ್ರಿ ಆವಾಸ್ ಯೋಜನೆ (ಗ್ರಾಮೀಣ) ಹಿನ್ನೆಲೆ**

ಗ್ರಾಮೀಣ ಪ್ರದೇಶದಲ್ಲಿ ವಸತಿ ರಹಿತ ಮತ್ತು ಕಚ್ಚಾ ಮನೆಗಳಲ್ಲಿ ವಾಸಿಸುತ್ತಿರುವ ಕುಟುಂಬಗಳಿಗೆ ಮೂಲಭೂತ ಸೌಕರ್ಯಗಳೊಂದಿಗೆ ಪಕ್ಕಾ ಮನೆಗಳನ್ನು ಒದಗಿಸುವ ಗುರಿಯನ್ನು ಹೊಂದಿದೆ. ಗ್ರಾಮೀಣ ಪ್ರದೇಶಗಳಲ್ಲಿ ವಾಸಿಸುವ ಎಲ್ಲಾ ಕುಟುಂಬಗಳಿಗೂ ಮನೆಗಳನ್ನು ಒದಗಿಸುವುದು ಇದರ ಮೂಲ ಉದ್ದೇಶವಾಗಿದೆ.

ಇಂದಿರಾ ಆವಾಸ್/ಪ್ರಧಾನ ಮಂತ್ರಿ ಆವಾಸ್ ಯೋಜನೆಯು ಕೇಂದ್ರ ಸರ್ಕಾರದ ಗ್ರಾಮೀಣಾಭಿವೃದ್ಧಿ ಇಲಾಖೆಯ ಯೋಜನೆಯಾಗಿದ್ದು ಗ್ರಾಮೀಣ ಪ್ರದೇಶದ ಬಡ ಜನರಿಗೆ ವಸತಿ ಕಲ್ಪಿಸುವ ಯೋಜನೆಯಾಗಿದೆ. ಭಾರತ ಸರ್ಕಾರವು ಜೂನ್ 1985ರಲ್ಲಿ ಆರ್.ಎಲ್.ಇ.ಜಿ.ಪಿ. (ಗ್ರಾಮೀಣ ಭೂರಹಿತ ಕೃಷಿ ಕಾರ್ಮಿಕರಿಗೆ ಉದ್ಯೋಗ ಭರವಸೆ ಯೋಜನೆಯ) ಒಂದು ಭಾಗವಾಗಿ ಇಂದಿರಾ ಆವಾಸ್ ಯೋಜನೆಯನ್ನು ಪ್ರಾರಂಭಿಸಲಾಯಿತು. ತದನಂತರ ಜವಾಹರ್ ರೋಜ್ಗಾರ್ ಯೋಜನೆಯ ಉಪ ಯೋಜನೆಯಾಗಿ ಮುಂದುವರೆದು ಏಪ್ರಿಲ್ 1989ರಿಂದ ಜೆ.ಆರ್.ವೈ ಯೋಜನೆಯ ಶೇ.10 ಭಾಗ ಅನುದಾನವನ್ನು ಇಂದಿರಾ ಆವಾಸ್ ಯೋಜನೆಗೆ ವರ್ಗಾಯಿಸಲಾಯಿತು. 1993–94ರಿಂದ ಈ ಯೋಜನೆಯನ್ನು ಪ.ಜಾತಿ ಮತ್ತು ಪ.ಪಂಗಡ, ಇತರೆ ಸಮುದಾಯದವರಿಗೂ ಕೂಡ ವಿಸ್ತರಿಸಲಾಯಿತು. ಜನವರಿ 1996 ರಿಂದ ಇಂದಿರಾ ಆವಾಸ್ ಯೋಜನೆಯನ್ನು ಜೆ.ಆರ್.ವೈ (ಜವಾಹರ್ ರೋಜ್‌ಗಾರ್ ಯೋಜನೆ)ಯಿಂದ ಪ್ರತ್ಯೇಕಿಸಿ ಒಂದು ಸ್ವತಂತ್ರ ಯೋಜನೆಯಾಗಿ ಮಾರ್ಪಡಿಸಲಾಯಿತು. ನಂತರ 2015–16ರಲ್ಲಿ 'ಪ್ರಧಾನ ಮಂತ್ರಿ ಆವಾಸ್ ಯೋಜನೆ (ಗ್ರಾಮೀಣ)' ಎಂಬುದಾಗಿ ಮರು ನಾಮಕರಣ ಮಾಡಲಾಗಿದೆ.

ಈ ಯೋಜನೆಯನ್ನು 1996 ರಿಂದ 2004–05ರವರೆಗೆ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯಿಂದ ಅನುಷ್ಠಾನಗೊಳಿಸಲಾಗುತ್ತಿತ್ತು, ಇದನ್ನು 2004–05ನೇ ಸಾಲಿನಿಂದ ರಾಜೀವ್ ಗಾಂಧಿ ಗ್ರಾಮೀಣ ವಸತಿ ನಿಗಮಕ್ಕೆ ವರ್ಗಾಯಿಸಲಾಗಿದೆ.

ಈ ಯೋಜನೆಯನ್ನು ಪ್ರಮುಖವಾಗಿ ಬಡತನ ರೇಖೆಗಿಂತ ಕೆಳಗಿರುವವರಾಗಿರಬೇಕು, 18 ವರ್ಷ ಮೇಲ್ಪಟ್ಟವರಾಗಿರಬೇಕು, ಯೋಜನೆಯನ್ನು ಪಡೆಯಲು ಮಹಿಳೆಯರಿಗೆ ಆದ್ಯತೆಯನ್ನು ನೀಡಲಾಗಿದೆ. ಒಂದು ವೇಳೆ ಅಂಗವಿಕಲರು ಮತ್ತು ವಿಧುರಾಗಿದಲ್ಲಿ ಪುರುಷರಿಗೆ ಆದ್ಯತೆ ನೀಡಲಾಗುತ್ತದೆ. ಒಟ್ಟು ಭೌತಿಕ ಗುರಿಯಲ್ಲಿ 60% ಪರಿಶಿಷ್ಟಜಾತಿ ಮತ್ತು ಪ.ಪಂಗಡದವರಿಗೆ, ಹಾಗೂ ಶೇ.15ರಷ್ಟು ಅಲ್ಪಸಂಖ್ಯಾತರಿಗಾಗಿ ಮತ್ತು ಉಳಿದ 25% ಸಾಮಾನ್ಯ ವರ್ಗದವರಿಗಾಗಿ ಮೀಸಲಾಗಿಡಲಾಗಿರುತ್ತದೆ. ಈ ಯೋಜನೆಯಲ್ಲಿ ಕೇಂದ್ರ ಸರ್ಕಾರವು ಶೇ.60ರಷ್ಟು, ರಾಜ್ಯ ಸರ್ಕಾರವು ಶೇ.40ರಷ್ಟು ಪಾಲು ನೀಡುತ್ತದೆ. ಆದರೆ ಕೇಂದ್ರಾಡಳಿತದ ಪ್ರದೇಶಗಳಲ್ಲಿ ಶೇ.90ರಷ್ಟು ಕೇಂದ್ರ ಸರ್ಕಾರದ್ದಾಗಿದ್ದು, ರಾಜ್ಯ ಸರ್ಕಾರವು ಶೇ. 10ರಷ್ಟು ಹಣವನ್ನು ಒದಗಿಸುತ್ತಾದೆ.

2016–17ನೇ ಸಾಲಿಗೆ ಕೇಂದ್ರ ಸರ್ಕಾರವು ಪ್ರತಿ ಮನೆಯ ಘಟಕದ ವೆಚ್ಚವನ್ನು ಗುಡ್ಡಗಾಡು ಪ್ರದೇಶಗಳಿಗೆ ರೂ. 1,30,000/– ಗುಡ್ಡಗಾಡು ಅಲ್ಲದ ಪ್ರದೇಶಗಳಿಗೆ ರೂ.1,20,000/–ಕ್ಕೆ ಹೆಚ್ಚಿಸಿದ್ದು, ಇದರಲ್ಲಿ ಕೇಂದ್ರ ಸರ್ಕಾರದ ಪಾಲು ರೂ.72,000/– ಗಳು ಮತ್ತು ರಾಜ್ಯ ಸರ್ಕಾರದ ಪಾಲು ರೂ.48,000/– ಗಳಾಗಿರುತ್ತದೆ. ಪ.ಜಾತಿ/ಪ.ಪಂ ಫಲಾನುಭವಿಗಳಿಗೆ ಪ್ರತಿ ಮನೆಯ ಸಹಾಯಧನವನ್ನು 1,50,000/–ಕ್ಕೆ ಹೆಚ್ಚಿಸಿದ್ದು, ಇದರಲ್ಲಿ ಕೇಂದ್ರದ ಪಾಲು ರೂ.72,000/– ಮತ್ತು ರಾಜ್ಯದ ಪಾಲು ರೂ.78,000/– ಗಳಾಗಿರುತ್ತದೆ. ಪ್ರತಿ ಮನೆಗೆ ಶೌಚಾಲಯವನ್ನು ನಿರ್ಮಿಸಿ ಕೊಳ್ಳಲು ರೂ. 12,000/– ಗಳನ್ನು ಸ್ವಚ್ಛ ಭಾರತ್ ಮಿಷನ್ ಅಡಿಯಲ್ಲಿ ನೀಡಲಾಗುವುದು.

**ಗ್ರಾಮೀಣಾಭಿವೃದ್ಧಿಯಲ್ಲಿ ಪ್ರಧಾನ ಮಂತ್ರಿ ಆವಾಸ್ ಯೋಜನೆ ಮಹತ್ವ**

ಗ್ರಾಮೀಣ ವಸತಿ ಯೋಜನೆಯು ಜನರ ಜೀವನ ಮಟ್ಟವನ್ನು ಸುಧಾರಿಸಲು ಮತ್ತು ಗ್ರಾಮೀಣ ಅಭಿವೃದ್ಧಿಯನ್ನು ಉತ್ತೇಜಿಸಲು ಒಂದು ಪ್ರಮುಖವಾದ ಕಾರ್ಯಕ್ರಮವಾಗಿದೆ. ಪ್ರಧಾನ ಮಂತ್ರಿ ಆವಾಸ್ ಯೋಜನೆಯು ಗ್ರಾಮೀಣ ಪ್ರದೇಶದಲ್ಲಿನ ಕುಟುಂಬಗಳಿಗೆ ಉತ್ತಮವಾದ ಮತ್ತು ಸುರಕ್ಷಿತವಾದ ಮನೆಗಳನ್ನು ನಿರ್ಮಿಸಿರುವುದರಿಂದ ಅವರಿಗೆ ಸಾಮಾಜಿಕ ನೆಲೆಯ ಭದ್ರತೆಯನ್ನು ಒದಗಿಸಿದಂತಾಗುತ್ತದೆ. ಅಂತೆಯೇ ಅವರ ಕುಟುಂಬದ ಆರ್ಥಿಕ ಸ್ಥಿತಿಗತಿಗಳು ಉತ್ತಮಗೊಳಿಸಿದಂತಾಗುತ್ತದೆ. ಆ ಕುಟುಂಬ ಸದಸ್ಯರ ಆರೋಗ್ಯ, ಶಿಕ್ಷಣ ಹಾಗೂ ಇನ್ನಿತರ ಅಗತ್ಯತೆಯ ಮೇಲೆ ಹೂಡಿಕೆ ಮಾಡಲು ಅವಕಾಶ ಮಾಡಿಕೊಡುವಂತಾಗುತ್ತದೆ. ಹಾಗೆಯೇ ವಸತಿ ಯೋಜನೆಗಳನ್ನು ಮಹಿಳೆಯರ ಹೆಸರಿನಲ್ಲಿ ಮಂಜೂರು ಮಾಡುವುದರಿಂದ ಮಹಿಳಾ ಸಬಲೀಕರಣವಾಗಲು ಸಹಾಯ ಮಾಡುತ್ತದೆ. ವಸತಿ ಯೋಜನೆಯಿಂದ ಮನೆ ನಿರ್ಮಿಸುವಾಗ ಅವರು ಮೂಲಭೂತ ಸೌಕರ್ಯಗಳ ಅಭಿವೃದ್ಧಿಗೆ ಗಮನ ಹರಿಸುತ್ತಾರೆ. ಅಂದರೆ ಮನೆ ನಿರ್ಮಾಣದ ಸಮಯದಲ್ಲಿ ಶೌಚಾಲಯ, ಕುಡಿಯುವ ನೀರು, ವಿದ್ಯುತ್, ರಸ್ತೆ, ಒಳ ಚರಂಡಿಗಳಂತಹ ಅಗತ್ಯ ಸೇವೆಗಳನ್ನು ಪಡೆಯುವುದರ ಮೂಲಕ ಗ್ರಾಮೀಣ ಅಭಿವೃದ್ಧಿಯ ಕಡೆಗೆ ಒತ್ತು ನೀಡುವುದು. ವಸತಿ ಯೋಜನೆಯಿಂದ ಮನೆ ನಿರ್ಮಿಸುವುರಿಂದ ಗ್ರಾಮೀಣ ಜನರು ನಗರ ಪ್ರದೇಶಗಳಿಗೆ ವಲಸೆ ಹೋಗುವುದನ್ನು ನಿಲ್ಲಿಸಿ ತಮ್ಮ ಸ್ಥಳೀಯ ಸ್ಥಳಗಳಲ್ಲಿಯೇ ತಮ್ಮ ಉದ್ಯೋಗವನ್ನು ಮಾಡಲು ಪ್ರಾರಂಭಿಸುವರು. ಪ್ರಧಾನ ಮಂತ್ರಿ ಆವಾಸ್ ಯೋಜನೆಯ ಮನೆ ನಿರ್ಮಾಣ ಮಾಡಲು ಮಹಾತ್ಮ ಗಾಂಧಿ ರಾಷ್ಟ್ರೀಯ ಉದ್ಯೋಗ ಖಾತರಿಯ ಅಡಿಯಲ್ಲಿ ಉದ್ಯೋಗ ದೊರೆಯುವುದರಿಂದ ಗ್ರಾಮಗಳಿಂದ ನಗರ ಪ್ರದೇಶಗಳಿಗೆ ವಲಸೆ ಹೋಗುವುದನ್ನು ತಪ್ಪಿಸಿದಂತಾಗುತ್ತದೆ. ಸ್ಥಳೀಯವಾಗಿ ದೊರೆಯುವ ಸಾಮಗ್ರಿಗಳಿಂದ ಮನೆ ನಿರ್ಮಿಸಿಕೊಂಡು ಸ್ಥಳೀಯ ಸಂಪನ್ಮೂಲಗಳಿಗೆ ಆದ್ಯತೆ ನೀಡುವುದರ ಮುಖಾಂತರ ಗ್ರಾಮೀಣ ಅಭಿವೃದ್ಧಿಯಾಗಲು ಸಹಕಾರಿಯಾಗುವಂತೆ ಮಾಡುತ್ತದೆ.

**ಸಾಹಿತ್ಯವಲೋಕನ**

ಮಂಜೂರ್ ಹುಸೇನ್ ಮತ್ತು ಗೌಸಿಯಾ ಯಾಸೀನ್ (2004) ರವರ *"ರೂರಲ್ ಹೌಸಿಂಗ್ ಅಕಮಂಡೇಷನ್ ಎ ಕೇಸ್ ಸ್ಟಡಿ ಆಫ್ ಇಂದಿರಾ ಆವಾಸ್ ಯೋಜನ ಸ್ಕೀಮ್ ಇನ್ ಕಾಶ್ಮೀರ"* ಎಂಬ ಲೇಖನದಲ್ಲಿ ಗ್ರಾಮೀಣ ಪ್ರದೇಶದಲ್ಲಿ ವಾಸಿಸುವ ಬಡವರಿಗೆ ಮನೆಯನ್ನು ಮಂಜೂರು ಮಾಡಿದ್ದಾರೆ. ಬಹುಪಾಲು ಫಲಾನುಭವಿಗಳು ವಸತಿ ಸೌಕರ್ಯದ ಬಗ್ಗೆ ತಮ್ಮ ಅತೃಪ್ತಿಯನ್ನು ಹೊರಹಾಕಿದ್ದಾರೆ. ಫಲಾನುಭವಿಗಳು ಪಡೆದಿರುವ ಮನೆಗಳು ಕಳಪೆ ಗುಣಮಟ್ಟ ಮತ್ತು ಅಸಮರ್ಪಕತೆಯಿಂದ ಕೂಡಿದ್ದು, ಉತ್ತಮ ಗುಣಮಟ್ಟದ ಮನೆಯನ್ನು ನಿರ್ಮಿಸಿಕೊಳ್ಳಲು ಅನುದಾನ ಹೆಚ್ಚಿಸಬೇಕೆಂದು ಅಭಿಪ್ರಾಯ ಪಟ್ಟಿದ್ದಾರೆ.

ಶಿವಣ್ಣ (2018) ರವರ 'ಪರ್ಫಾರ್ಮೆನ್ಸ್ ಎವಲ್ಯೂಯೇಷನ್ ಆ ಹೌಸಿಂಗ್ ಸ್ಕೀಮ್ಸ್ ಇನ್ ಚಿತ್ರದುರ್ಗ ಡಿಸ್ಟ್ರಿಕ್ಟ್ ವಿಥ್ ಸ್ಪೆಷಲ್ ಟು ಇಂದಿರಾ ಆವಾಸ್ ಯೋಜನಾ' ಎಂಬ ಪ್ರಬಂಧದಲ್ಲಿ ಫಲಾನುಭವಿಗಳಿಗೆ ಮನೆ ಮಂಜೂರು ಮಾಡಲು ತುಂಬಾ ವಿಳಂಬ ಮಾಡುವುದು, ಶೀಟಿನ ಮನೆ ನಿರ್ಮಿಸಿಕೊಡುವುದು ಸಾಮಾನ್ಯವಾಗಿದೆ. ಗ್ರಾಮೀಣ ಬಡವರ ಜೀವನ ಸುಧಾರಣೆಯಲ್ಲಿ ಸರ್ಕಾರದ ಯೋಜನೆಗಳು ಸಹಾಯಕವಾಗಿದೆ. ಅದರಲ್ಲೂ ಇಂದಿರಾ ಆವಾಸ್ ಯೋಜನೆಯು ಶೇ.100ಕ್ಕೆ 100 ಬಡತನ ನಿರ್ಮೂಲನೆಗೆ ಸಹಕಾರಿಯಾಗಿರುವುದಾಗಿ ತಿಳಿಸಿರುವರು.

ರಂಗಸ್ವಾಮಿ (2019) ರವರ "ರಾಜೀವ್ ಗಾಂಧಿ ಗ್ರಾಮೀಣ ವಸತಿ ನಿಗಮ ನಿಯಮಿತದ ಕಾರ್ಯಕ್ಷಮತೆ ಮೌಲ್ಯಮಾಪನ" ಎಂಬ ವರದಿಯಲ್ಲಿ ಶೇ.100ಕ್ಕೆ 100ರಷ್ಟು ಫಲಾನುಭವಿಗಳೇ ಆ ಮನೆಯಲ್ಲಿ ವಾಸಮಾಡುತ್ತಿರುವುದು ಕಂಡುಬಂದಿದೆ. ಹೆಚ್ಚಿನ ಫಲಾನುಭವಿಗಳು ಗ್ರಾಮೀಣ ಮತ್ತು ನಗರಗಳ ಕಾರ್ಮಿಕರಾಗಿರುವರು ಅಥವಾ ಸಣ್ಣ ರೈತರಾಗಿದ್ದಾರೆ. ಗ್ರಾಮೀಣ ಮತ್ತು ನಗರ ಪ್ರದೇಶಗಳಲ್ಲಿ ಶೇ.60ಕ್ಕಿಂತ ಹೆಚ್ಚಿನವರು ಮೂಲಭೂತ ಸೌಕರ್ಯವನ್ನು ಒದಗಿಸಿಕೊಂಡು, ಮನೆ ನಿರ್ಮಾಣದ ಸಮಯದಲ್ಲಿ ಶೌಚಾಲಯ ನಿರ್ಮಾಣ ಮಾಡಿಕೊಳ್ಳುವುದರ ಮುಖಾಂತರ ಸ್ವಚ್ಛತೆಗೆ ಆದ್ಯತೆ ನೀಡಿದ್ದಾರೆ. ಬಹುತೇಕ ಫಲಾನುಭವಿಗಳು ನಮಗೆ ಈ ಯೋಜನೆಯಿಂದ ಸಮಾಜದಲ್ಲಿ ಉತ್ತಮವಾದ ಪರಿಸ್ಥಿತಿ ದೊರೆತ್ತಿದ್ದು, ಸಾಮಾಜಿಕವಾಗಿ, ಆರ್ಥಿಕವಾಗಿ ಸಬಲರಾಗಲು ಸಾಧ್ಯವಾಗಿದೆ ಹಾಗೂ ಸರ್ಕಾರದ ವಸತಿ ಯೋಜನೆಗಳು ತೃಪ್ತಿದಾಯಕವಾಗಿದೆ ಎಂದಿರುವರು ಎಂಬುದಾಗಿ ಸಂಶೋಧಕರು ತಿಳಿಸಿದ್ದಾರೆ.

**ಉದ್ದೇಶಗಳು**

- ಪ್ರಧಾನ ಮಂತ್ರಿ ಆವಾಸ್ ಯೋಜನೆಯ ಗುರಿ ಉದ್ದೇಶ ಮತ್ತು ಅದರ ಪ್ರಮುಖ ಅಂಶಗಳನ್ನು ತಿಳಿಯುವುದು.
- ಗ್ರಾಮೀಣ ಜನರ ಆರೋಗ್ಯ, ಶಿಕ್ಷಣ, ಆದಾಯದಂತಹ ಅಂಶಗಳ ಮೇಲೆ ಬೀರಿದ ಪ್ರಭಾವವನ್ನು ಪರಿಶೀಲಿಸುವುದು.
- ವಸತಿ ಯೋಜನೆಯನ್ನು ಪಡೆದುಕೊಳ್ಳುವಾಗ ಅವರಿಗೆ ಉಂಟಾಗಿರುವ ಅಡೆ-ತಡೆಗಳನ್ನು ತಿಳಿಯುವುದು.

**ಸಂಶೋಧನಾ ವಿಧಾನ:**

ಪ್ರಸ್ತುತ ಅಧ್ಯಯನಕ್ಕೆ ಮಾಧ್ಯಮಿಕ ಮೂಲಗಳಿಂದ ಮಾಹಿತಿ ಸಂಗ್ರಹಿಸಿ ವಿಶ್ಲೇಷಿಸಲಾಗಿದೆ. ಈ ಅಧ್ಯಯನದಲ್ಲಿ ಪ್ರಧಾನ ಮಂತ್ರಿ ಆವಾಸ್ ಯೋಜನೆಯ ವಾರ್ಷಿಕ ವರದಿಗಳು, ರಾಜೀವ್ ಗಾಂಧಿ ಗ್ರಾಮೀಣ ವಸತಿ ನಿಗಮ ನಿಯಮಿತದ ವಾರ್ಷಿಕ ವರದಿಗಳು, ಕರ್ನಾಟಕ ಅಂಕಿ-ಅಂಶಗಳ ನೋಟ ಹಾಗೂ ಚಾಮರಾಜನಗರ ಜಿಲ್ಲಾ ಅಂಕಿ-ಅಂಶಗಳ ನೋಟ ಎಂಬ ವಾರ್ಷಿಕ ವರದಿಗಳಿಂದ ಸಂಗ್ರಹಿಸಿದ ಮಾಹಿತಿಗಳನ್ನು ವಿಶ್ಲೇಷಿಸಲಾಗಿದೆ.

**ಕೋಷ್ಟಕ 1: ಪ್ರಧಾನ ಮಂತ್ರಿ ಆವಾಸ್ ಯೋಜನೆಯ ಪ್ರಗತಿ ವರದಿ**

| ಪ್ರಧಾನ ಮಂತ್ರಿ ಆವಾಸ್ ಯೋಜನೆ | ಸರ್ಕಾರದ ನಿರ್ದಿಷ್ಟ ಗುರಿ | ಆಯ್ಕೆಯಾದ ಫಲಾನುಭವಿಗಳು | ಪೂರ್ಣಗೊಂಡ ಮನೆಗಳು |
|---|---|---|---|
| ಭಾರತ | 3,32,80,374 | 3,21,01,204 | 2,66,92,527 |

**ಫಲಿತಾಂಶ ಮತ್ತು ಚರ್ಚೆಗಳು**

ಕೋಷ್ಟಕಗಳನ್ನು ಗಮನಿಸಿದಾಗ ಸರ್ಕಾರದ ನಿರ್ದಿಷ್ಟ ಗುರಿಗಿಂತ ಕಡಿಮೆ ಸಾಧನೆಯಾಗಿದ್ದರೂ ಕೂಡ ವಸತಿ ಯೋಜನೆಯನ್ನು ಪಡೆದಿರುವ ಬಹುತೇಕ ಫಲಾನುಭವಿಗಳು ಬಡತನ ರೇಖೆಗಿಂತ ಕೆಳಗಿರುವವರಾಗಿದ್ದಾರೆ. ಈ ಯೋಜನೆಯಡಿ ದೊರೆಯುವ ಅನುದಾನದಿಂದ ಗುಣಮಟ್ಟದ ಮನೆಯನ್ನು ನಿರ್ಮಿಸಿಕೊಳ್ಳಲು ಸಾಧ್ಯವಾಗದ ಕಾರಣ ಬಹುತೇಕ ಫಲಾನುಭವಿಗಳು ತಮ್ಮ ಸ್ವಂತ ಹಣವನ್ನು ಅದರೊಂದಿಗೆ ವೆಚ್ಚ ಮಾಡಿ ಮನೆ ನಿರ್ಮಿಸಿಕೊಳ್ಳುತ್ತಾರೆ. ಮೂಲತಃ ಕಡುಬಡನದಿಂದ ಕೂಡಿರುವ ಫಲಾನುಭವಿಗಳು ಅನುದಾನಕ್ಕಿಂತ ಹೆಚ್ಚಿನ ಹಣವನ್ನು ವಿನಿಯೋಗಿಸಲು ಲೇವಾದೇವಿಗಾರರಿಂದ ಸಾಲ, ಜಮೀನು ಒಡವೆಗಳನ್ನು ಅಡಮಾನವಿಡುತ್ತಾರೆ. ಇದಲ್ಲದೆ ತಮ್ಮ ಜೀವನೋಪಾಯಕ್ಕಾಗಿ ಇರುವಂತಹ ಜಾನುವಾರುಗಳನ್ನು ಕೂಡ ಮಾರಾಟ ಮಾಡುವುದು

ಹಾಗೂ ಸ್ವ ಸಹಾಯ ಸಂಘದಿಂದ ಸಾಲವನ್ನು ಪಡೆದುಕೊಳ್ಳುವುದನ್ನು ಕಾಣಬಹುದಾಗಿದೆ.

**ಕೋಷ್ಟಕ 2: ಪ್ರಧಾನ ಮಂತ್ರಿ ಗ್ರಾಮೀಣ ಆವಾಸ್ ಯೋಜನೆಯಡಿ ಕರ್ನಾಟಕದಲ್ಲಿ 2018–2023ರ ವರೆಗೆ ಪೂರ್ಣಗೊಂಡಿರುವ ಮನೆಗಳ ಅಂಕಿ–ಅಂಶದ ವಿವರ.**

| **ರಾಜ್ಯಗಳು** | **2018–19** | **2019–20** | **2020–21** | **2021–22** | **2022–23** |
|---|---|---|---|---|---|
| ಬೆಳಗಾವಿ | 6283 | 1291 | 1305 | 2129 | 1681 |
| ಬಾಗಲಕೋಟೆ | 1187 | 273 | 300 | 387 | 393 |
| ವಿಜಯಪುರ | 1373 | 301 | 280 | 401 | 591 |
| ಕಲ್ಬುರ್ಗಿ | 2551 | 450 | 209 | 446 | 684 |
| ಬೀದರ್ | 0 | 336 | 216 | 152 | 261 |
| ರಾಯಚೂರು | 8350 | 2161 | 1428 | 1093 | 1873 |
| ಕೊಪ್ಪಳ | 1570 | 480 | 460 | 832 | 1426 |
| ಗದಗ | 1388 | 418 | 476 | 631 | 895 |
| ಧಾರವಾಡ | 1319 | 262 | 267 | 619 | 640 |
| ಉತ್ತರ ಕನ್ನಡ | 332 | 99 | 75 | 125 | 168 |
| ಹಾವೇರಿ | 1914 | 632 | 509 | 400 | 692 |
| ಬಳ್ಳಾರಿ | 486 | 829 | 650 | 303 | 316 |
| ಚಿತ್ರದುರ್ಗ | 3195 | 1085 | 716 | 385 | 838 |
| ದಾವಣಗೆರೆ | 746 | 234 | 209 | 217 | 368 |
| ಶಿವಮೊಗ್ಗ | 611 | 147 | 189 | 168 | 318 |
| ಉಡುಪಿ | 139 | 15 | 35 | 32 | 36 |
| ಚಿಕ್ಕಮಗಳೂರು | 275 | 56 | 54 | 110 | 128 |
| ತುಮಕೂರು | 2668 | 835 | 604 | 497 | 776 |
| ಕೋಲಾರ | 1533 | 386 | 300 | 235 | 419 |
| ಬೆಂಗಳೂರು ನಗರ | 113 | 27 | 24 | 16 | 37 |
| ಬೆಂಗಳೂರು (ಗ್ರಾ) | 356 | 82 | 66 | 58 | 115 |
| ಮಂಡ್ಯ | 415 | 90 | 252 | 419 | 479 |
| ಹಾಸನ | 737 | 152 | 252 | 404 | 413 |
| ದಕ್ಷಿಣ ಕನ್ನಡ | 102 | 28 | 48 | 23 | 107 |
| ಕೊಡಗು | 87 | 31 | 8 | 0 | 19 |
| ಮೈಸೂರು | 3475 | 1051 | 708 | 863 | 1442 |
| ಚಾಮರಾಜನಗರ | 3603 | 1026 | 687 | 430 | 870 |
| ಚಿಕ್ಕಬಳ್ಳಾಪುರ | 1525 | 424 | 364 | 278 | 614 |
| ರಾಮನಗರ | 711 | 137 | 204 | 202 | 170 |
| ಯಾದವಗಿರಿ | 5779 | 1344 | 641 | 669 | 721 |
| ವಿಜಯಪುರ | 0 | 0 | 0 | 289 | 87 |
| **ಒಟ್ಟು** | **52,823** | **14,682** | **11,536** | **12,813** | **17,577** |

**ಕೋಷ್ಟಕ 3: ಚಾಮರಾಜನಗರ ಜಿಲ್ಲೆಯಲ್ಲಿ 2018 ರಿಂದ 2023ರ ವರೆಗೆ ಪ್ರಧಾನ ಮಂತ್ರಿ ಗ್ರಾಮೀಣ ಆವಾಸ್ ಯೋಜನೆಯಡಿಯಲ್ಲಿ ನಿರ್ಮಿಸಲಾದ ಮನೆಗಳ ಅಂಕಿ–ಅಂಶಗಳ ವಿವರ.**

| **ವರ್ಷಗಳು** | **ಪ್ರಧಾನ ಮಂತ್ರಿ ಆವಾಸ್ ಯೋಜನೆ (ಗ್ರಾಮೀಣ)** |
|---|---|
| 2018–19 | 3,603 |
| 2019–20 | 1,026 |
| 2020–21 | 687 |
| 2021–22 | 430 |
| 2022–23 | 870 |
| ಒಟ್ಟು | **6,616** |

ಯೋಜನೆ ಪಡೆದುಕೊಳ್ಳುವುದು ಸುಲಭದ ಮಾತಲ್ಲ ಬದಲಿಗೆ ಸ್ಥಳೀಯ ಪಂಚಾಯಿತಿ ಸದಸ್ಯರು ಕೆಲವು ವೇಳೆ ವಿಧಾನ ಸಭಾ ಸದಸ್ಯರಿಂದಲೂ ಕೂಡ ಪ್ರಭಾವ ಬೀರಿಸುವುದು ಅನಿವಾರ್ಯವಾಗುತ್ತದೆ. ಈ ಯೋಜನೆಯಲ್ಲಿ ಅನುದಾನವನ್ನು ಹಂತ ಹಂತವಾಗಿ ಬಿಡುಗಡೆ ಮಾಡಲಾಗುತ್ತದೆ. ಆ ಸಂದರ್ಭದಲ್ಲಿ ಪಂಚಾಯಿತಿ ಸದಸ್ಯರಿಗೆ ಮತ್ತು ಅಧಿಕಾರಿಗಳಿಗೆ ಲಂಚ ನೀಡುವುದು ಅನಿವಾರ್ಯವಾಗುತ್ತದೆ, ಇಲ್ಲವಾದಲ್ಲಿ ಅನುದಾನ ಬಿಡುಗಡಿ ಮಾಡುವಲ್ಲಿ ವಿಳಂಬ ನೀತಿ ಅನುಸರಿಸುತ್ತಾರೆ. ಬಹುತೇಕ ಸಂದರ್ಭಗಳಲ್ಲಿ ರಾಜಕೀಯ ಪ್ರಭಾವ ಬೀರುವಂತಹ ವ್ಯಕ್ತಿಗಳು ಹಾಗೂ ಗ್ರಾಮ ಪಂಚಾಯಿತಿ ಸದಸ್ಯರ ಸಂಬಂಧಿಕರಿಗೆ ಪಂಚಾಯಿತಿ ಹೆಚ್ಚು ಸೌಲರ್ಭಯಗಳು ದೊರಕುವುದು ಸಾಮಾನ್ಯವಾಗಿದೆ. ಅಂದರೆ ಫಲಾನುಭವಿಗಳು ಆಯ್ಕೆ ಪಾರದರ್ಶಕವಾಗಿ ನಡೆಯದಿರುವುದನ್ನು ಕಾಣಬಹುದಾಗಿದೆ.

ಪ್ರಧಾನ ಮಂತಿ ಆವಾಸ್ ಯೋಜನೆಯಡಿ ಪಕ್ಕಾ ಮನೆ ನಿರ್ಮಾಣ ಮಾಡುವುದರಿಂದ ಜಲ ಜೀವನ್ ಮಿಷನ್ ಕಾರ್ಯಕ್ರಮದ ಅಡಿಯಲ್ಲಿ ಶುದ್ಧ ಕುಡಿಯುವ ನೀರಿನ ಸೌಲಭ್ಯವನ್ನು ಪಡೆದುಕೊಳ್ಳ ಬಹುದು. ಹಾಗೆಯೇ ಮನೆ ನಿರ್ಮಿಸುವ ಸಮಯಲ್ಲಿ ಸ್ವಚ್ಛ ಭಾರತ್ ಅಭಿಯಾನದ ಅಡಿಯಲಿ ಶೌಚಾಲಯ ನಿರ್ಮಿಸಿಕೊಂಡು ಬಳಸುವುದ್ದರಿಂದ ಆರೋಗ್ಯದ ಮೇಲೆ ಧನಾತ್ಮಕ ಪರಿಣಾಮ ಬೀರಿದೆ.

ಒಟ್ಟಾರೆಯಾಗಿ ಹೇಳುವುದಾದರೆ ಕೇಂದ್ರ ಸರ್ಕಾರದ ಈ ಯೋಜನೆಯು ಗ್ರಾಮೀಣ ಪ್ರದೇಶದ ಜನರ ಆರೋಗ್ಯ, ಶಿಕ್ಷಣ, ಜೀವನ ಸುಧಾರಣೆಗಾಗಿ ಇರುವುದರಿಂದ ಇದು ಗ್ರಾಮೀಣ ಅಭಿವೃದ್ಧಿಗೆ ಪೂರಕವಾದ ಒಂದು ಯೋಜನೆಯಾಗಿದೆ.

**ಸಲಹೆಗಳು**

- ಮನೆ ನಿರ್ಮಾಣಕ್ಕೆ ಅಗತ್ಯವಿರುವ ಕಚ್ಚಾ ಸಾಮಗ್ರಿಗಗಳ ವೆಚ್ಚ ದಿನದಿಂದ ದಿನಕ್ಕೆ ಅಧಿಕವಾಗುತ್ತಿರುವುದ್ದರಿಂದ ವಸತಿ ನಿರ್ಮಾಣಕ್ಕೆ ನೀಡುವ ಅನುದಾನವನ್ನು ಕೂಡ ಕಾಲದಿಂದ ಕಾಲಕ್ಕೆ ಹೆಚ್ಚಿಸಬೇಕು.
- ಯಾವುದೇ ರಾಜಕೀಯ ಅಥವಾ ಆಮಿಷಗಳಿಗೆ ಒಳಗಾಗದೆ ಯೋಜನೆಗೆ ಅರ್ಹ ಫಲಾನುಭವಿಗಳನ್ನು ಆಯ್ಕೆ ಮಾಡಬೇಕು.
- ಫಲಾನುಭವಿಗಳಿಗೆ ಕಾಲದಿಂದ ಕಾಲಕ್ಕೆ ಸಕಾಲದಲ್ಲಿ ಅನುದಾನ ಬಿಡುಗಡೆ ಮಾಡುವುದರ ಜೊತೆಗೆ ಅಧಿಕಾರಿಗಳು ಆಗಾಗ್ಗೆ ಪ್ರಗತಿ ಪರಿಶೀಲಿಸಬೇಕು.

- ವಸತಿ ಯೋಜನೆಗಳಿಗೆ ಸಂಬಂಧಿಸಿದಂತೆ ಕುಂದು ಕೊರತೆಯನ್ನು ಆಲಿಸಲು ಸಹಾಯವಾಣಿ ಆರಂಭಿಸ ಬೇಕು ಹಾಗೂ ಯಾರಿಂದಾದರೂ ತೊಂದರೆಗಳು ಉಂಟಾಗುತ್ತಿದೆಯೇ ಎಂಬುದನ್ನು ತಿಳಿಯಲು ತನಿಖಾ ಅಧಿಕಾರಿಗಳ ತಂಡವನ್ನು ರಚನೆ ಮಾಡಬೇಕು.

**ಪರಾಮರ್ಶನ ಗ್ರಂಥಗಳು**


- *ಚಾಮರಾಜನಗರ ಜಿಲ್ಲಾ ಅಂಕಿ–ಅಂಶಗಳ ನೋಟ 2018–23ರ ವರೆಗಿನ ವರದಿಗಳು. (2023).* ಜಿಲ್ಲಾ ಸಾಂಖ್ಯಿಕ ಸಂಗ್ರಹಣಾಧಿಕಾರಿಗಳ ಕಛೇರಿ, ಜಿಲ್ಲಾ ಪಂಚಾಯತ್.
- *ಕರ್ನಾಟಕ ಅಂಕಿ–ಅಂಶಗಳ ನೋಟ 2018–23ರ ವರೆಗಿನ ವರದಿಗಳು.* (2023). ಆರ್ಥಿಕ ಮತ್ತು ಸಾಂಖ್ಯಿಕ ನಿರ್ದೇಶನಾಲಯ, ಕರ್ನಾಟಕ ಸರ್ಕಾರ.
- *ಕರ್ನಾಟಕ ಆರ್ಥಿಕ ಸಮೀಕ್ಷೆಯ ವರದಿಗಳು.* (2023). ಆರ್ಥಿಕ ಮತ್ತು ಸಾಂಖ್ಯಿಕ ನಿರ್ದೇಶನಾಲಯ, ಕರ್ನಾಟಕ ಸರ್ಕಾರ.
- *ರಾಜೀವ್ ಗಾಂಧಿ ವಸತಿ ನಿಗಮ ನಿಯಮಿತ ವಾರ್ಷಿಕ ವರದಿ ಮತ್ತು ಲೆಕ್ಕ ಪರಿಶೋಧಕರ ವರದಿಗಳು.* ರಾಜೀವ್ ಗಾಂಧಿ ವಸತಿ ನಿಗಮ ನಿಯಮಿತ, ಕರ್ನಾಟಕ ಸರ್ಕಾರ.
- ರಂಗಸ್ವಾಮಿ. (2019). *ರಾಜೀವ್ ಗಾಂಧಿ ಗ್ರಾಮೀಣ ವಸತಿ ನಿಗಮ ನಿಯಮಿತದ ಕಾರ್ಯಕ್ಷಮತೆ ಮೌಲ್ಯಮಾಪನ.* ಕರ್ನಾಟಕ ಮೌಲ್ಯಮಾಪನ ಪ್ರಾಧಿಕಾರ ಯೋಜನೆ, ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಇಲಾಖೆ.
- Hussain, M., & Yaseen, G. (2004). *Rural housing accommodation: A case study of Indira Awas Yojana (IAY) scheme in Kashmir. Kashmir Journal of Social Sciences (KJSS),* 6(7). 48–57.
- Saji. (2020). *A case study on Pradhan Mantri Awas Yojana in Mallappally Block Panchayath, Thanamthitta District Kerala. Journal of Emerging Technologies and Innovative Research (JETIR),* 7(4).
- Shivanna. (2018). *Performance evaluation of housing schemes in Chitradurga District with special reference to Indira Awas Yojana* [Unpublished master's thesis]. Kuvempu University, Karnataka.